ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ- 07 / ಪಿ.ಡಬ್ಲ್ಯೂ- 02

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 17-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಆಂಜನೇಯ |
| ತಂದೆಯ ಹೆಸರು - | ಪ್ರಹ್ಲದ್ |
| ವಯಸ್ಸು - | 51 ವರ್ಷಗಳು |
| ಉದ್ಯೋಗ - | ಟ್ರಾನ್ಸಪೋರ್ಟ್ ವ್ಯವಹಾರ |
| ವಾಸಸ್ಥಳ - | ಬೆಂಗಳೂರು |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ನಿಪಿ 2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.- 2 ಬಿ ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 3 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 4 ರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ದಿಃ 29.12.2023 ರಂದು ಹಂಪಿ ರಸ್ತೆಯ ಶಾಲೆಯ ಹತ್ತಿರದಲ್ಲಿ ಪಡೆದುಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ಅಪಘಾತದ ವಿಚಾರವಾಗಿ ಸಹಿ ಪಡೆದಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು, ಚಾಸಾ 8 ಮತ್ತು ಒಬ್ಬ ಸ್ವಾಮಿ ಅಜ್ಜರವರು ಇದ್ದರು. ಸದರಿ ಅಜ್ಜರವರು ಮೃತ ಪಟ್ಟ ವ್ಯಕ್ತಿಯ ಹಿಂದೆ ಕುಳಿತುಕೊಂಡು ಹೋಗುತ್ತಿದ್ದಾಗ ಅಪಘಾತವಾದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಸ್ಥಳದಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ಆಗ ಸಮಯ ಬೆಳಿಗ್ಗೆ 10.00 ರಿಂದ 11.00 ಗಂಟೆಯಾಗಿರುತ್ತದೆ. ನಂತರ 12.00 ಗಂಟೆಯ ಸುಮಾರಿಗೆ ಪೊಲೀಸ ಠಾಣೆಗೆ ಕರೆದುಕೊಂಡು ಹೋದರು. ಠಾಣೆಯಲ್ಲಿ ಎರಡು ಬೈಕ್‌ಗಳು ಇದ್ದು ಅವುಗಳ ಮುಂದೆ ಫೋಟೊ ತೆಗೆದರು. ಅಲ್ಲಿ ನನ್ನ ಸಹಿ ಪಡೆದರು. ಸಾಕ್ಷಿ ಜಪ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಜಪ್ತು ಪಂಚನಾಮೆಯನ್ನು ನಿಪಿ 6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 5 ರ ಫೋಟೊವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಾಹನಗಳು ಯುನಿಕಾರ್ನ್ ಮತ್ತು ಸ್ಪ್ಲೆಂಡರ್ ವಾಹನಗಳಾಗಿದ್ದವು. ಸದರಿ ವಾಹನಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡರು.

ಸಿ. ಸಿ. ನಂ.- 286/2024

ಸಿ.ಡಬ್ಲ್ಯೂ.- 07 / ಪಿ.ಡಬ್ಲ್ಯೂ.- 02

ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಎಸ್ ಕೆ ಡಿ ಅರ್ ರವರಿಂದ-

ನಾನು ಬಿ.ಕಾಮ್ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಪೊಲೀಸ ಠಾಣೆಗೆ ನನ್ನನ್ನು ಯಾವ ಪೊಲೀಸರು ಕರೆದಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಪೊಲೀಸರು ಪೋನ್ ಮಾಡಿದ್ದರು. ಮನೆತನಕ ಬಂದಿರುವುದಿಲ್ಲ. ಪೋನ್ ಮಾಡಿದ ಪೊಲೀಸರು ನನಗೆ ಪರಿಚಯವಿಲ್ಲ. ಪೊಲೀಸರಿಗೆ ನನ್ನ ಪೋನ್ ನಂಬರನ್ನು ಯಾರು ಕೊಟ್ಟರು ಎಂದು ನಾನು ವಿಚಾರಿಸಲಿಲ್ಲ. ಪೊಲೀಸರಿಗೆ ನನ್ನ ನಂಬರನ್ನು ಚಾಸಾ 1 ರವರು ನೀಡಿರಬಹುದು. ಚಪ್ಪರದಹಳ್ಳಿಯ ಜನರೆಲ್ಲ ಚಾಸಾ 1 ರವರ ಮಠಕ್ಕೆ ಆಗಾಗ ಹೋಗಿ ಆಶಿರ್ವಾದ ತೆಗೆದುಕೊಂಡು ಬರುತ್ತಾರೆ ಎಂದರೆ ಸರಿ.

2. ಪೊಲೀಸರು ನನಗೆ ದಿಃ 29.12.2023 ರಂದು ಬೆಳಿಗ್ಗೆ 8.30 ಗಂಟೆಗೆ ಕರೆ ಮಾಡಿದ್ದರು. ಪೊಲೀಸರು ಪೋನ್ ಮಾಡಿ ನನಗೆ ಘಟನಾ ಸ್ಥಳಕ್ಕೆ ಬರಲು ಹೇಳಿದರು. ಅಲ್ಲಿಗೆ ನಾನೇ ಹೋದೆ. ಪೊಲೀಸರು ಕರೆದುಕೊಂಡು ಹೋಗಿಲ್ಲ. ಸ್ಥಳದಲ್ಲಿ ಪೊಲೀಸ ಜೀಪ್ ಇರಲಿಲ್ಲ ಎಂದರೆ ಸರಿ. ಘಟನಾ ಸ್ಥಳದ ಚೆಕ್ ಬಂದಿ ನನಗೆ ಗೊತ್ತು. ಉತ್ತರಕ್ಕೆ ಶಾಲೆ ಇದೆ. ದಕ್ಷಿಣಕ್ಕೆ ಸಾಯಿಬಾಬಾ ದೇವಸ್ಥಾನ ಇದೆ ಎಂದರೆ ಸರಿ. ಹಂಪಿ ರಸ್ತೆ ಯಾವತ್ತು ಜನಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿ. ಸಾಯಿಬಾಬಾ ಗುಡಿಯ ಹತ್ತಿರ ಸಣ್ಣ ಡಬ್ಬಿ ಅಂಗಡಿ ಇದೆ ಎಂದರೆ ಸರಿ.

3. ಪೊಲೀಸ ಠಾಣೆಯಲ್ಲಿ ಪೊಲೀಸರು ಎಷ್ಟು ದಾಖಲೆಗಳಿಗೆ ಸಹಿ ಮಾಡಿಸಿಕೊಂಡರು ಎಂದು ಹೇಳಲು ಬರುವುದಿಲ್ಲ. ಅಂದಾಜು 4 ಇರಬಹುದು. ನಿಪಿ 2, 3 ಮತ್ತು 6 ರಲ್ಲಿನ ನನ್ನ ಸಹಿಗಳನ್ನು ಠಾಣೆಯಲ್ಲಿಯೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸಹಿ ಮಾಡಿಸಿಕೊಂಡ ಅಂದಾಜು 4 ದಾಖಲೆಗಳಲ್ಲಿ ನಿಪಿ 2, 3 ಮತ್ತು 6 ಸಹ ಇವೆ ಎಂದರೆ ಸರಿ. ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ಮತ್ತು ನಂಬರ ಹೇಳಲು ಬರುವುದಿಲ್ಲ. ನಾನು ಮಾಡಿದ ನಂತರ ಚಾಸಾ 8 ರವರು ನಿಪಿ 2, 3 ಮತ್ತು 6 ರ ದಾಖಲೆಗಳಿಗೆ ಠಾಣೆಯಲ್ಲಿಯೆ ಸಹಿ ಮಾಡಿದರು ಎಂದರೆ ಸರಿ.

ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ- 07 / ಪಿ.ಡಬ್ಲ್ಯೂ- 02

4. ಮೃತ ವ್ಯಕ್ತಿ ನನಗೆ ಪರಿಚಯ ಎಂದರೆ ಸರಿಯಲ್ಲ. ಠಾಣೆಯಲ್ಲಿ ಇದ್ದ ವಾಹನಗಳ ನಂಬರ ನನಗೆ ಗೊತ್ತಿಲ್ಲ. ಮೃತ ವ್ಯಕ್ತಿಯ ವಾಹನದ ಪರವಾನಿಗೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಮೃತ ವ್ಯಕ್ತಿಯ ಕುಟುಂಬದವರು ವಿಮಾ ಕ್ಲೇಮ್ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ರ ಫೋಟೊಗಳನ್ನು ಯಾವ ಪೊಲೀಸರು ಯಾವ ಕ್ಯಾಮರಾದಿಂದ ತೆಗೆದಿದ್ದಾರೆ ಎಂದು ಹೇಳಲು ಬರುವುದಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿಯೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.